

ನನಗೆ ತೋರಿಸಲೆಂಬಂತೆ ಠೀವಿಯಿಂದ ಹಕ್ಕಿ ವೈಪರಿನಲ್ಲೇ ಅತ್ತಿಂದಿತ್ತ ನಡೆದಾಡಲಾರಂಭಿಸಿತು.

ನನ್ನ ಮನಸ್ಸಿನಲ್ಲಿ ನಮ್ಮ ಬಾಲ್ಯ ಹಾದುಹೋಯಿತು. ನಮ್ಮ ಮನೆಯ ಎದುರಲ್ಲಿ ಒಂದು ಬೂರುಗದ ಮರವಿತ್ತು. ಅದರಲ್ಲಿ ಆಗಾಗ ಕೆಲವು ಹಕ್ಕಿಗಳು ಕಾಣಸಿಗುತ್ತಿದ್ದವು. ಇದೇ ಜಾತಿಯ ಹಕ್ಕಿಗಳು. ಒಟ್ಟು ಒಂದು ಮುಷ್ಟಿಯ ಗಾತ್ರ. ಹತ್ತಿಯ ಗರಿಗಳು. ಸಣ್ಣ ಕೊಕ್ಕು ಮತ್ತು ಸ್ವಲ್ಪ ಉದ್ದ ಕಾಲು. ಅವುಗಳಲ್ಲಿ ಕೆಲವು ಧೈರ್ಯ ಮಾಡಿ ನಮ್ಮ ಚಾವಡಿಗೆ ಬಂದು ಬಿದಿರುಕೋಲಲ್ಲಿ ನೇತಾಡುವ ಸೌತೆಗಳ ಮೇಲೋ ಅಥವಾ ಗೋಡೆಯಲ್ಲಿ ನೇತಾಡುತ್ತಿದ್ದ ದೇವರ ಫೋಟೊಗಳ ಮೇಲೋ ಕೂರುತ್ತಿದ್ದವು. ನಮ್ಮಮ್ಮ, ‘‘ಅಗೋ ಅಲ್ಲಿ ನೋಡು... ಹಕ್ಕಿ ನೋಡು, ಅದಕ್ಕೂ ಹಸಿವಾಗಿದೆಯಂತೆ, ನೀನು ಊಟ ಮಾಡದಿದ್ದರೆ ಹಕ್ಕಿಗೆ ಕೊಡುತ್ತೇನೆ’’ ಎಂದು ತಮ್ಮನನ್ನು ಮರುಳು ಮಾಡಿ ಊಟ